
# ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?

■ ಅರವಿಂದ ಜಿ. ಜೋಷಿ
ಕಲೆ: ಸಂತೋಷ್ ಸಸಿಹಿತ್ಲು



ಬೇಲಾಪುರದ ತಾಯವ್ವಳಿಗೆ ಮಧು ಎಂಬ ಒಬ್ಬನೇ ಮಗ ಇದ್ದ. ಆತ ಒಂದು ವರ್ಷದವನಿದ್ದಾಗಲೇ ತಂದೆಯನ್ನು ಕಳೆದುಕೊಂಡಿದ್ದ. ಅವನ ತಾಯಿ ಅವನನ್ನು ತುಂಬಾ ಮುದ್ದಿನಿಂದ ಬೆಳೆಸತೊಡಗಿದ್ದಳು. ತಾಯಮ್ಮ ಓದು ಬರಹ ಕಲಿತಿಲ್ಲವಾದರೂ ಸಮಾಜದ ಆಗುಹೋಗುಗಳ ಬಗ್ಗೆ ತಿಳಿದುಕೊಂಡಿದ್ದಳು. ಆಕೆ ಪತಿ ಕಟ್ಟಿಸಿದ್ದ ಪುಟ್ಟ ಮನೆಯಲ್ಲಿ ವಾಸಿಸುತ್ತಿದ್ದಳು. ಜೀವನ ಸಾಗಿಸಲು ತಾಯವ್ವ ಅವರಿವರ ಮನೆ ಕೆಲಸ ಮಾಡುತ್ತಿದ್ದಳು. ಮಧು ಶಾಲೆಗೆ ಹೋಗುವ ವಯಸ್ಸಿಗೆ ಬಂದಾಗ ಆತನನ್ನು ಹತ್ತಿರದ ಸರ್ಕಾರಿ ಶಾಲೆಗೆ ಸೇರಿಸಿದ್ದಳು.

ಗನನ್ನು ಶಾಲೆಗೆ ಸೇರಿಸುವಾಗ ಆತನಿಗೆ ಬೇಕಾದ ವಸ್ತುಗಳನ್ನು ಕೊಡಿಸಿದ್ದಳು. ಪ್ರತಿದಿನ ತಾನು ಕೆಲಸಕ್ಕೆ ಹೋಗುವ ಮುನ್ನ ಆತನನ್ನು ಶಾಲೆಗೆ ಬಿಟ್ಟು ಹೋಗುತ್ತಿದ್ದಳು. ಸಂಜೆ ಶಾಲೆ ಬಿಟ್ಟ ನಂತರ ಮಧು ತನ್ನ ನೆರೆಹೊರೆಯ ಗೆಳೆಯರೊಂದಿಗೆ ಮನೆಗೆ ಬರುತ್ತಿದ್ದ. ತಾಯವ್ವ ಕೆಲಸದಿಂದ ಬಂದಾಕ್ಷಣ ಆತನಿಗೆ ಶಾಲೆಯಲ್ಲಿ ಕೊಟ್ಟ ಮನೆಗೆಲಸ ಮಾಡಲು ಹೇಳುತ್ತಿದ್ದಳು. ಆಕೆಗೆ ತನ್ನ ಮಗ ತನ್ನಂತೆ ಅನಕ್ಷರಸ್ಥನಾಗದೇ ಚೆನ್ನಾಗಿ ಓದು ಬರಹ ಕಲಿಯಲಿ ಎಂಬ ಇರಾದೆ ಇತ್ತು. ಆದರೆ ಮಧು ಮಾತ್ರ ಓದಿಗಿಂತ ಆಟದಲ್ಲೇ ಹೆಚ್ಚು ಕಾಲ ಕಳೆಯತೊಡಗಿದ್ದ. ಆತ ಅರ್ಧ ವಾರ್ಷಿಕ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದ. ಈ ವಿಷಯ ತಿಳಿಸಲು ಶಾಲಾ ಶಿಕ್ಷಕರು ತಾಯವ್ವನನ್ನು ಭೇಟಿ ಮಾಡಿ ಆತನಿಗೆ ಸ್ವಲ್ಪ ಓದುವುದರ ಕಡೆ ಗಮನ ಕೊಡಲು ಹೇಳಿ ಎಂದಿದ್ದರು. ತಾಯವ್ವನಿಗೆ ವಿಷಯ ತಿಳಿದಾಗ ಬಹಳ ಬೇಸರಪಟ್ಟು ಆತನಿಗೆ ಒಂದೆರಡು ಪೆಟ್ಟು ಕೊಟ್ಟು ಓದುವಂತೆ ಸೂಚಿಸಿದ್ದಳು. ಪಾಪ ಆಕೆಯ ಎದುರು ಮಧು ಪುಸ್ತಕ ಹಿಡಿದಂತೆ ನಾಟಕವಾಡಿ ಓದುವುದು ಬಿಟ್ಟು ಆಟದಲ್ಲಿ ಕಾಲ ಕಳೆಯತೊಡಗಿದ್ದ. ಎರಡು ಮೂರು ತಿಂಗಳ ಬಳಿಕ ಮತ್ತೆ ಮಧುನ ಶಿಕ್ಷಕರು ಆತ ಸುಧಾರಿಸಿಲ್ಲ ಎಂದು ತಾಯವ್ವನಿಗೆ ಹೇಳಿದಾಗ ಆಕೆ ಇನ್ನಷ್ಟು ನೊಂದಿದ್ದಳು. ಹಾಗೂ ಹೀಗೂ ಕುಂಟುತ್ತಾ ಮಧು ಹೈಸ್ಕೂಲ್‌ಗೆ ಬಂದಾಗ ಅಲ್ಲಿನ ಕೆಲವು ಸಹಪಾಠಿಗಳ ಸಹವಾಸದಿಂದ ದಾರಿ ತಪ್ಪತೊಡಗಿದ್ದ. ಓದಿಗಿಂತ ಹೆಚ್ಚಾಗಿ ಶೋಕಿಯಲ್ಲೇ ಕಾಲ ಕಳೆಯತೊಡಗಿದ್ದ. ಇದರ ಜೊತೆಗೆ ಮನೆಯಲ್ಲಿ ಆತನ ತಾಯಿ ಅಷ್ಟೊ ಇಷ್ಟೊ ಅಲ್ಲಲ್ಲಿ ಬಚ್ಚಿಟ್ಟ ಹಣವನ್ನು ಕದಿಯುವುದು ಕಲಿತಿದ್ದ. ಆತನಿಗೆ ಓದಿಗಿಂತ ದುಡ್ಡಿನ ರುಚಿ ಚೆನ್ನಾಗಿ ಹಿಡಿಸಿದ್ದರಿಂದ ಆತ ಅದನ್ನು ಹೊಂದಿಸಲು ಸಣ್ಣ ಪುಟ್ಟ ಕಳ್ಳತನಕ್ಕೆ ಇಳಿದಿದ್ದ. ಈ ವಿಷಯ ತಾಯವ್ವಳ ಗಮನಕ್ಕೆ ಬಂದಾಗ ಆಕೆ ಎಷ್ಟೇ ಅತ್ತು ಗೋಗರೆದರೂ ಅದು ಆತನ ಮೇಲೆ ಏನೂ ಪರಿಣಾಮ ಬೀರಲಿಲ್ಲ.

ಇದರಿಂದ ತಾಯವ್ವಳಿಗೆ ಆತನ ಬಗ್ಗೆ ಚಿಂತೆ ದಿನೇ ದಿನೇ ಹೆಚ್ಚಾಗತೊಡಗಿತ್ತು. ಒಂದು ದಿನ ಆತ ಮನೆಗೆ ಬಾರದೇ ಇದ್ದಾಗ ರಾತ್ರಿ ಇಡೀ ನಿದ್ದೆ ಇಲ್ಲದೇ ಒದ್ದಾಡಿ ಕಣ್ಣೀರು ಸುಸುವುದೇ ಆಗಿತ್ತು. ಮರುದಿನ ಬೆಳಿಗ್ಗೆ ಆಕೆಯ ಮಗನೊಂದಿಗೆ ಪೊಲೀಸರು ಬಂದಿರುವುದು ಕಂಡ ತಾಯವ್ವಳಿಗೆ ಜೀವ ಝಲ್ ಎಂದಿತ್ತು. ಏಕೆಂದರೆ ಮಧು, ಹಿಂದಿನ ದಿನ ಬ್ಯಾಂಕಿನಲ್ಲಿ ಒಬ್ಬ ವಯೋವೃದ್ಧರು ಹಣ ತೆಗೆದುಕೊಂಡು ಹೋಗುವಾಗ ಅವರನ್ನು ತಳ್ಳಿ ಅವರಲ್ಲಿ ಇದ್ದ ಹಣ ಕಸಿದು ಪರಾರಿ ಆಗಿದ್ದ. ಆಗ ಅಲ್ಲಿನ ಸಾರ್ವಜನಿಕರು ಸೇರಿ ಕಳ್ಳತನ ಮಾಡಿದ ಮಧುನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು. ಆ ರಾತ್ರಿ ಆತನನ್ನು ಸ್ಟೇಷನಿನಲ್ಲೇ ಇಟ್ಟುಕೊಂಡು ಮಾರನೇ ದಿನ ತಾಯವ್ವಳ ಮನೆಗೆ ಬಂದು, ವಿಷಯ ತಿಳಿಸಿ ಬುದ್ಧಿ ಹೇಳುವಂತೆ ಹೇಳಿದ್ದರು. ಆಗ ತಾಯವ್ವ ಕಣ್ಣೀರಿಡುತ್ತ ಆತನಿಗೆ ಬುದ್ಧಿ ಹೇಳಿದ್ದರೂ, ನಾಯಿಯ ಬಾಲ ಡೊಂಕು ಎಂಬಂತೆ ಎರಡು ತಿಂಗಳ ಬಳಿಕ ಮತ್ತೆ ಮಧು ಎಲ್ಲೋ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಹಣ ಕದ್ದು ಪೊಲೀಸರ ಕೈಗೆ ಸಿಲುಕಿದ್ದ. ಆಗ ಪೊಲೀಸರು ಆತನನ್ನು ಬಾಲಾಪರಾಧಿ ಕೇಂದ್ರಕ್ಕೆ ಕಳುಹಿಸಿದ್ದರು. ■